ಇ) ಈ ಕಾಮಗಾರಿಯ ತಾಂತ್ರಿಕ ಶಕ್ಯತೆ ನೀರಿನ ಲಭ್ಯತೆಯ ಬಗ್ಗೆ ಸಂಪೂರ್ಣ ಸರ್ವೆ ಕಾರ್ಯಕೈಗೊಳ್ಳಬೇಕಾಗಿದೆ. ಆರ್ಥಿಕ ಲಭ್ಯತೆ ಹಾಗೂ ಸರ್ವೆಕಾರ್ಯ ಕೈಗೊಂಡು ಯೋಜನಾ ವರದಿಯನ್ನು ತಯಾರಿಸಿ ಮುಂದಿನ ಸಾಲುಗಳಲ್ಲಿ ಪರಿಶೀಲಿಸಲಾಗುವುದು.

ಚಿಕ್ಕಪೇಟೆ ಕ್ಷೇತ್ರದ ನೀರಿನ ಪೈಪ್‌ಗಳ ಬದಲಾವಣೆ

827 - ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರು ನಗರದ ಚಿಕ್ಕಪೇಟೆ ವಿಧಾನ ಸಭಾ ಕ್ಷೇತ್ರದಲ್ಲಿರುವ ನೀರಿನ ಪೈಪುಗಳು ತುಂಬಾ ಹಳೆಯದಾಗಿದ್ದು, ಸರಿಯಾಗಿ ನೀರು ಸರಬರಾಜು ಆಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹಾಗಿದ್ದಲ್ಲಿ, ಈ ವಿಷಯದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :

1) ಹೌದು.

2) ಬೆಂಗಳೂರು ಜಲ ಮಂಡಲಿಯು ನಗರದಲ್ಲಿ ಬಹು ಹಿಂದೆ ಹಾಕಲಾಗಿದ್ದ ಹಳೆಯ ಮತ್ತು ತುಕ್ಕು ಹಿಡಿದ ಕೊಳವೆಗಳನ್ನು ಬದಲಾಯಿಸುವ ಪ್ರಸ್ತಾವನೆಯನ್ನು ಕೈಗೆತ್ತಿಕೊಂಡಿದೆ. ಹಳೆಯ ತರಗುಪೇಟೆ, ಮಾಮೂಲು ಪೇಟೆ ಮತ್ತು ಮಂಡಿಪೇಟೆ ಪ್ರದೇಶಗಳಲ್ಲಿ 3 ಅಂಗುಲ ವ್ಯಾಸದ ಕೊಳವೆಗಳನ್ನು ಬದಲಾಯಿಸಲು ರೂ. 5.25 ಲಕ್ಷಗಳ ಒಂದು ಅಂದಾಜು ಪಟ್ಟಿಯನ್ನು ಮಂಜೂರು ಮಾಡಲಾಗಿದೆ. ಶೀಘ್ರದಲ್ಲಿಯೇ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು. ಮುಂದುವರಿದಂತೆ ಈ ಯೋಜನೆಯ ಅಡಿಯಲ್ಲಿ ಚಿಕ್ಕಪೇಟೆ ಕ್ಷೇತ್ರದಲ್ಲಿ 6 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅಂದಾಜು ಪಟ್ಟಿಗಳನ್ನು ತಯಾರಿಸಿದೆ. ಹಂತ ಹಂತವಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

ನಗರಪಾಲಿಕೆಯ ವಸತಿ ಗೃಹಗಳು ಕುಸಿದು ಹೋಗಿರುವುದು

828 - ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ದಿನಾಂಕ 14-06-1996ರಂದು ಬಿದ್ದುಹೋಗಿರುವ ವಸತಿ ಗೃಹಗಳು ನಗರ ಪಾಲಿಕೆಗೆ ಸಂಬಂಧಿಸಿದವೇ?

ಆ) ಇದರಲ್ಲಿ ಮೃತಪಟ್ಟವರ ಸಂಖ್ಯೆ ಎಷ್ಟು? ಗಾಯಗೊಂಡವರ ಸಂಖ್ಯೆ ಎಷ್ಟು?

ಇ) ವಸತಿ ಗೃಹಗಳನ್ನು ನಿರ್ಮಿಸಲಾಗಿದ್ದು ಎಂದು? ಬಿದ್ದು ಹೋಗಲು ಕಾರಣವೇನು?

ಈ) ಕಟ್ಟಡ ಕುಸಿದ ಬಗ್ಗೆ ತನಿಖೆ ನಡೆಸಲು ಸರ್ಕಾರ ಯಾರನ್ನಾದರೂ ನೇಮಕಮಾಡಿದೆಯೇ?

ಊ) ಆಗಿದ್ದಲ್ಲಿ ತನಿಖಾ ವರದಿ ಸಲ್ಲಿಸಲಾಗಿದೆಯೇ? (ವಿವರ ನೀಡುವುದು)

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಹೌದು.

ಆ) ಮೃತಪಟ್ಟವರ ಸಂಖ್ಯೆ 8
ಗಾಯಗೊಂಡವರ ಸಂಖ್ಯೆ 10

ಇ) ಈ ಕಟ್ಟಡವು 1979-80ರಲ್ಲಿ ನಿರ್ಮಾಣವಾಗಿತ್ತು. ವಿಪರೀತ ಮಳೆಯ ಕಾರಣದಿಂದಾಗಿ ಹಾಗೂ ಕಳಪೆ ಗುಣಮಟ್ಟದ ಕಾಮಗಾರಿಯಿಂದ ಕಟ್ಟಡವು ಕುಸಿದು ಬಿದ್ದುಹೋಗಿರುತ್ತದೆ.

ಈ) ಹೌದು.

ಉ) ಹೌದು. ಖ್ಯಾತ ತಜ್ಞರ ವರದಿಯು ಬಂದಿದ್ದು, ಸದರಿಯವರ ವರದಿಯಲ್ಲಿ ಕಾಮಗಾರಿಯ ಕಳಪೆ ಗುಣಮಟ್ಟದಿಂದ ಕೂಡಿದ್ದ ಪ್ರಯುಕ್ತ ಸದರಿ ವಸತಿಗೃಹವು ವಿಪರೀತ ಮಳೆಯಿಂದ ಕುಸಿದು ಬಿದ್ದು ಹೋಗಿರುತ್ತದೆ.

ತಿಪ್ಪಗೊಂಡನಹಳ್ಳಿ ಜಲಾಶಯದ ಮಟ್ಟ

829 - ಶ್ರೀ ಪಿ.ಸಿ. ಮೋಹನ್ (ಚಿಕ್ಕಪೇಟೆ) : ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ತಿಪ್ಪಗೊಂಡನಹಳ್ಳಿಯಲ್ಲಿರುವ ಜಲಾಶಯದ ಪೂರ್ಣಮಟ್ಟವೆಷ್ಟು?*
2. *ಕಳೆದ ಹತ್ತು ವರ್ಷಗಳಲ್ಲಿ ಎಷ್ಟು ಬಾರಿ ಈ ಜಲಾಶಯವು ಭರ್ತಿಯಾಗಿದೆ ಮತ್ತು ಎಂದು?*
3. *ಕಳೆದ ಹತ್ತು ವರ್ಷಗಳಲ್ಲಿ ಜಲಾಶಯಕ್ಕೆ ಬಂದ ನೀರಿನ ಪ್ರಮಾಣವೆಷ್ಟು? ವರ್ಷವಾರು ಮಾಹಿತಿ ನೀಡುವುದು, ಈಗ ಹಾಲಿ ನೀರಿನ ಪ್ರಮಾಣವೆಷ್ಟು?*
4. *ಇನ್ನು ಎಷ್ಟು ಕಾಲ ಈಗ ಇರುವ ನೀರನ್ನು ಬೆಂಗಳೂರು ನಗರಕ್ಕೆ ಪೂರೈಕೆ ಮಾಡಬಹುದು?*
5. *ಈ ಜಲಾಶಯದಲ್ಲಿರುವ ಹೂಳಿನ ಪ್ರಮಾಣ ಎಷ್ಟು? ಹೂಳನ್ನು ತೆಗೆದು ಜಲಾಶಯವನ್ನು ಶುದ್ದೀಕರಿಸಲಾಗುವುದೇ (ವಿವರ ನೀಡಿ)*

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :

1) ಈ ಜಲಾಶಯದಲ್ಲಿ ಪೂರ್ಣ ಮಟ್ಟವು ಸಮುದ್ರ ಮಟ್ಟದಿಂದ 1574 ಅಡಿಗಳಾಗಿರುತ್ತದೆ ಅಂದರೆ 74 ಅಡಿಗಳಷ್ಟು ನೀರಿನ ಎತ್ತರ.